## ಅಪ್ಪನ ಪ್ರತಿಷ್ಠೆಯ ಪರಮಾವಧಿ

ಇನ್ನೇನು ಝೀ ಕನ್ನಡದ 'ಜೊತೆ ಜೊತೆಯಲಿ' ಮುಗಿಯುತ್ತಾ ಬಂತು ಅಂತಾ ಅನಿಸುತ್ತಿದೆ. ಆದರೆ ಮತ್ತೆ ಮತ್ತೆ ಸೂತ್ರವಿಲ್ಲದ ಗಾಳಿ ಪಟದಂತೆ ಅದನ್ನು ಹಿಗ್ಗಿಸುತ್ತಿದ್ದಾರೆ. ಅದರಲ್ಲೂ ಕಳೆದೆರಡು ವಾರಗಳಿಂದ ನಾಯಕಿಯ ಅಪ್ಪ ಅಮ್ಮ ಬೆಂಗಳೂರಿನ ರಸ್ತೆ ಮತ್ತು ದೇವಸ್ಥಾನಗಳಲ್ಲಿ ಕಾಣಿಸುತ್ತಿದ್ದಾರೆ. ಅನಾಥರಂತಿರುವ ಅವರು ತಮ್ಮ ಚಹರೆಯನ್ನು ಮುಚ್ಚಿಡಲು ಬೆಡ್‌ಶೀಟಿನಿಂದ ಮುಖ ಮುಚ್ಚಿಕೊಳ್ಳುತ್ತಾರೆ.

ಎದುರಿಗೇ ಇದ್ದರೂ ನೋಡಿಯೂ ನೋಡದಂತೆ ಅಲೆದಾಡುವ ಪರಿಸ್ಥಿತಿ ನೋಡಿದರೆ ಓಬಿರಾಯನ ಕಾಲದ ಸಿನಿಮಾಗಳು ಜ್ಞಾಪಕಕ್ಕೆ ಬರುತ್ತವೆ. ಮಗಳ ಮೇಲಿನ ಪ್ರೀತಿಗಿಂತ ಅಪ್ಪನ ಸ್ವಪ್ರತಿಷ್ಠೆ ಅತಿರೇಕದ ಪರಮಾವಧಿ ಮೇಲಾಗುತ್ತದೆ. ತರ್ಕವೇ ಇಲ್ಲದ ಘಟನಾವಳಿಗಳ ಸರಮಾಲೆ. ಇನ್ನೂ ಎಳೆದರೆ 'ಜೊತೆ ಜೊತೆಯಲಿ' ತನ್ನ ವಿಶೇಷತೆಯನ್ನು ಕಳೆದುಕೊಳ್ಳುತ್ತದೆ. ಹೀಗಾಗುವ ಮುನ್ನ ಧಾರಾವಾಹಿಗೆ ತಾರ್ಕಿಕ ಅಂತ್ಯ ಕಾಣಿಸುವುದು ಕ್ಷೇಮ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಮಾದರಿ ಕಥೆ



ಸ್ಟಾರ್ ಸುವರ್ಣದ 'ರಾಧೆ ಶ್ಯಾಮ' ಧಾರಾವಾಹಿ ಕುಟುಂಬದ ಎಲ್ಲಾ ಸದಸ್ಯರು ವೀಕ್ಷಿಸುವ ಸುಂದರ ಧಾರಾವಾಹಿ. ಶ್ಯಾಮನ ಮುಗ್ಧ ಮುಖ, ರಾಧೆಯ ದಿಟ್ಟತನ, ಪರಿಸ್ಥಿತಿಯನ್ನು ಎದುರಿಸುವ ಅನಿವಾರ್ಯತೆ, ಸವಾಲು, ಶ್ಯಾಮನ ತಾಯಿಯ ಒಡೆತನದ ನಟನೆ, ರಾಧೆಯ ಅತ್ತಿಗೆಯ ಅಂತಃಕರಣದ ಪ್ರದರ್ಶನ ಸಮಾಜಕ್ಕೆ ಉತ್ತಮ ಸಂದೇಶ ನೀಡುವಂತಿದೆ.

ಹಿಂದಿಯಲ್ಲಿ ಪ್ರಸಾರವಾದ 'ದಿಯಾ ಔರ್ ಬಾತೇ ಹಂ' ಛಾಯೆ ಇದರ ಮೇಲೆ ಇದ್ದರೂ, ಕನ್ನಡದಲ್ಲಿ ಇತ್ತೀಚೆಗೆ ಪ್ರಸಾರವಾಗುತ್ತಿರುವ ತ್ರಿಕೋನ ಪ್ರೇಮ, ಖಳನಾಯಕಿ, ರೌಡಿಗಳ ಉಪಟಳಕ್ಕಿಂತ ವಿಭಿನ್ನ ಕಥೆಯ ಪರಿಕಲ್ಪನೆ ಕುತೂಹಲದಿಂದ ಕೂಡಿದೆ. ಅತ್ತಿಗೆ ನಾದನಿಯ ಅವಿನಾಭಾವ ಸಂಬಂಧ ಧಾರಾವಾಹಿಯ ಪ್ರಧಾನ ಅಂಶ.

—ಶ್ರೀಧರ ರಾಯಸಂ, ಬೆಂಗಳೂರು

ವಾರದ ಪತ್ರ

## ಲೇವಡಿಗೆ ಪ್ರಚೋದಿಸುತ್ತಿವೆ

ಧಾರಾವಾಹಿಗಳು ವೀಕ್ಷಕರ ಕುತೂಹಲವನ್ನು, ಕಾತುರವನ್ನು ಉಳಿಸಿಕೊಳ್ಳುತ್ತಿರಬೇಕು. ಅವರನ್ನು ಮುಂದೇನು ಎಂದು ಕಾದು ನಿಲ್ಲಿಸುವಂತೆ ರೂಪಿಸಬೇಕು. ಅವು ಹೊಸ ಹೊಸ ತಿರುವು ಪಡೆಯುತ್ತಿರಬೇಕು. ಇದು ಧಾರಾವಾಹಿಗಳ ಮುಂದುವರಿಕೆಯ ಸಿದ್ಧ ಸೂತ್ರ.

ಯಾವುದೇ ತಿರುವು ಪಡೆದರೂ ಅದು ಕಥೆಗೆ ಪೂರಕವಾಗಿರಬೇಕು ಮತ್ತು ಅನಿವಾರ್ಯವೂ ಆಗಿರಬೇಕು. ವೀಕ್ಷಕರಿಗೆ ಇದರಲ್ಲಿ ನೈಜತೆ ಕಾಣಬೇಕು. ಕಥೆಯನ್ನು ಎಳೆಯುವ ಒಂದೇ ದೃಷ್ಟಿಯಲ್ಲಿ ತಿರುವು ನೀಡುತ್ತಾ ಹೋದರೆ, ಕಥೆಯು ಸ್ವಾದವನ್ನು ಕಳೆದುಕೊಂಡು ಹಾಸ್ಯಾಸ್ಪದವಾಗಿ ನಗೆಪಾಟಲಿಗೀಡಾಗುತ್ತದೆ. ಕಲರ್ಸ್ ಕನ್ನಡದ 'ನಮ್ಮೂರ ಯುವರಾಣಿ', 'ಮಿಥುನ ರಾಶಿ' ಮತ್ತು 'ಮಂಗಳಗೌರಿ'ಯ ತಿರುವುಗಳನ್ನು ನೋಡಿದ ವೀಕ್ಷಕರಿಗೆ 'ನ ಭೂತೋ ನ ಭವಿಷ್ಯತಿ' ಎಂದು ಲೇವಡಿ ಮಾಡುವಂತೆ ಆಗಿದೆ. ಈ ತಿರುವುಗಳಿಗೆ ಧಾರಾವಾಹಿಯನ್ನು ಎಳೆಯುವುದನ್ನು ಬಿಟ್ಟರೆ ಯಾವುದೇ ಅರ್ಥಪೂರ್ಣ ಅನಿವಾರ್ಯತೆ ಕಾಣುವುದಿಲ್ಲ.

—ರಮಾನಂದ ಶರ್ಮಾ, ಬೆಂಗಳೂರು

## ಮೌಲ್ಯ ಕಳೆದುಕೊಳ್ಳದಿರಲಿ 'ಅನುಬಂಧ'

ಕಲರ್ಸ್ ಕನ್ನಡದಲ್ಲಿ ಅನುಬಂಧ ಅವಾರ್ಡ್ಸ್ ಪ್ರೋಮೊ ಅದ್ದೂರಿಯಾಗಿ ಪ್ರಸಾರ ಮಾಡುತ್ತಿದ್ದಾರೆ. ಅದರ ಪುನರಾವರ್ತನೆ ವೀಕ್ಷಕರಲ್ಲಿ ಕಿರಿಕಿರಿಯನ್ನು ಉಂಟುಮಾಡುತ್ತಿದೆ.

'ಜನಮೆಚ್ಚಿದ ನಾಯಕ', 'ಜನಮೆಚ್ಚಿದ ನಾಯಕಿ' ಸೇರಿದಂತೆ ಬೇರೆ ಬೇರೆ ಪುರಸ್ಕಾರಗಳಿಗೆ ವೀಕ್ಷಕರಿಂದ ಮತಗಳನ್ನು ಸಂಗ್ರಹಿಸಿದೆ. ಅದು ಎಷ್ಟರ ಮಟ್ಟಿಗೆ ಪರಿಗಣನೆ ಆಗುತ್ತೋ ಗೊತ್ತಿಲ್ಲ. ಬಹುತೇಕ ಎಲ್ಲರಿಗೂ ಒಂದೊಂದು ಅವಾರ್ಡ್ ನೀಡುವುದು ನಿಶ್ಚಿತ. ಹೀಗಾದರೆ ದೊಡ್ಡದಾಗಿ ಬಿಂಬಿಸಿ ನೀಡುವ ಪುರಸ್ಕಾರಕ್ಕೆ ಯಾವ ಮೌಲ್ಯ ಬಂದೀತು? ಅದು ಏನಾದರೂ ಆಗಲಿ, ಬೇಗ ಅವಾರ್ಡ್ ನೀಡಿ ಅರ್ಧಗಂಟೆಗೊಮ್ಮೆ ಬರುವ ಜಾಹೀರಾತಿನಿಂದ ಆಗುವ ಕಿರಿಕಿರಿ ತಪ್ಪಿದರೆ ಸಾಕು.

—ನಳಿನಿ ಬೆಂಗಳೂರು

## ಹೆಮ್ಮೆಯ ಸೂರ್ಯಕಾಂತ

ಕಲರ್ಸ್ ಕನ್ನಡದ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದಲ್ಲಿ ಸೂರ್ಯಕಾಂತ ತುಂಬಾ ಚೆನ್ನಾಗಿ ಹಾಡುತ್ತಿದ್ದಾರೆ. ಮಾತನಾಡುವಾಗ ತೊದಲುವ ಸಮಸ್ಯೆ ಇದ್ದರೂ ಹಾಡುವಾಗ ನಿರರ್ಗಳವಾಗಿ ಹಾಡಿ ಕೇಳುಗರ ಮನಸೂರೆಗೊಳ್ಳುತ್ತಿರುವ ಸೂರ್ಯಕಾಂತ ಅವರ ಸಾಧನೆ ನಿಜಕ್ಕೂ ಹೆಮ್ಮೆ ತರುವಂತಹದ್ದು.

—ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್

ಜನಪದ ಸೊಗಡು: ಈ ವಾರದ ಎದೆ ತುಂಬಿ ಹಾಡುವೆನು ಸಂಚಿಕೆ ತುಂಬಾ ಚೆನ್ನಾಗಿ ಮೂಡಿಬಂತು. ಜನಪದದ ಸೊಗಡನ್ನು ಕಣ್ತುಂಬಿಕೊಂಡೆವು. ಹಾಗೆಯೇ ಈ ಸಂಚಿಕೆಯಲ್ಲಿ ಹಲವು ಜನಪದ ಕಲಾವಿದರು ಹಾಗೂ ಗೊತ್ತೇ ಇರದ ವಾದ್ಯಗಳನ್ನು ಪರಿಚಯಿಸಿ ಕೊಟ್ಟ ತಂಡಕ್ಕೆ ಧನ್ಯವಾದಗಳು.

—ಮಧುಮತಿ ಅಭಿಷೇಕ್, ಚಿತ್ರದುರ್ಗ

## ಅಹಂಕಾರ ಪರ್ಫೆಕ್ಟ್ ಅಲ್ಲ

ಝೀ ಕನ್ನಡದ 'ಹಿಟ್ಲರ್ ಕಲ್ಯಾಣ'ದ ಎಜೆ 'ಪರ್ಫೆಕ್ಟ್' ಎನ್ನಲಾಗುತ್ತಿದೆ. ಈ ಪರ್ಫೆಕ್ಟ್ ತನದಲ್ಲಿ ಏನಿಲ್ಲದಿದ್ದರೂ ಸಜ್ಜನಿಕೆ ಇರಬೇಕು. ಎಜೆಗೆ ಪರಿಚಯವಿದ್ದ ಲೀಲಾ ಮನೆಯವರು ಮದುವೆಗೆ ಬಂದಾಗ 'ಇಲ್ಲಿಗೇಕೆ ಬಂದಿರಿ?' ಎಂದು ಕೇಳಿ ಅವಮಾನಿಸುವುದು ಪರ್ಫೆಕ್ಟ್ ತನಕ್ಕೆ ಒಪ್ಪುವಂಥದ್ದಲ್ಲ. ವೈರಿಯೇ ಆಗಿರಲಿ, ಇಂಥ ಶುಭ ಸಂದರ್ಭದಲ್ಲಿ ಎಲ್ಲವನ್ನೂ ಮರೆತು ಬರಮಾಡಿಕೊಳ್ಳುವುದು ನಿಜವಾದ ಸಂಸ್ಕೃತಿ. ಅದೇ ನಿಜವಾದ ಪರ್ಫೆಕ್ಟ್.

—ಶಂಕರೇಗೌಡ ತುಂಬಕೆರೆ, ಮಂಡ್ಯ

## ಹೊಸತನಕ್ಕೆ ಮಿಡಿಯಲಿ

ಚಂದನದಲ್ಲಿ 'ಥಟ್ ಅಂತ ಹೇಳಿ' ಎನ್ನುವ ಕಾರ್ಯಕ್ರಮವನ್ನು ಇಷ್ಟು ವರ್ಷಗಳ ಕಾಲ ಸಮರ್ಥವಾಗಿ ಡಾ. ನಾ. ಸೋಮೇಶ್ವರ ಅವರು ನಿರೂಪಿಸಿ ದಾಖಲೆಯನ್ನು ಮಾಡಿದ್ದಾರೆ. ಅವರಿಗೆ ವಂದನೆಗಳು.

ಯಾಕೋ ಇತ್ತೀಚೆಗೆ ಆ ಕಾರ್ಯಕ್ರಮದಲ್ಲಿ ಮೊದಲಿನ ಉತ್ಸಾಹ ಕಾಣಿಸುತ್ತಿಲ್ಲ. ಒಂದು ರೀತಿಯ ಏಕತಾನತೆ ಎದ್ದು ಕಾಣುತ್ತಿದೆ. ಕಾರ್ಯಕ್ರಮವನ್ನು ಉತ್ಸಾಹಭರಿತವಾಗಿ ಹೊಸ ಹೊಸ ರೂಪದಲ್ಲಿ ನಡೆಸಲು, ಯುವಕರಿಗೆ ಹಸ್ತಾಂತರ ಮಾಡಿದರೆ ಒಳ್ಳೆಯದೆಂದು ಅನಿಸುತ್ತದೆ.

—ವಿ. ವಿಜಯೇಂದ್ರ ರಾವ್, ಬೆಂಗಳೂರು